# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 943 |
| ಸದಸ್ಯರ ಹೆಸರು | : | ಶ್ರೀ ಹೆಚ್. ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 22-02-2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳು ಮಳಿಗೆ ಅಥವಾ ನಿವೇಶನ ಹಂಚಿಕೆಯ ಮೌಲ್ಯದಲ್ಲಿ ರಿಯಾಯಿತಿ ನೀಡಿ ಅಂತಹ ಬಂಡವಾಳ ಸಬ್ಸಿಡಿಯನ್ನು ಹಣಕಾಸು ಸಂಸ್ಥೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅವಧಿ ಸಾಲ ಮತ್ತು ದುಡಿಮೆ ಬಂಡವಾಳ ನೀಡುವಾಗ ಮಳಿಗೆ ಅಥವಾ ನಿವೇಶನದಲ್ಲಿನ ಮೌಲ್ಯ ರಿಯಾಯಿತಿಯನ್ನು ಮೇಲಾಧಾರ ಭದ್ರತೆಯಾಗಿ ಪರಿಗಣಿಸಲು ಸರ್ಕಾರಕ್ಕೆ ಏನಾದರು ತೊಂದರೆಗಳಿವೆಯೇ; (ವಿವರ ನೀಡುವುದು) | • ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುತ್ತಿರುವ ನಿವೇಶನಗಳಿಗೆ ಹಂಚಿಕೆ ದರದ ಶೇ.75 ರಷ್ಟು ರಿಯಾಯಿತಿಯನ್ನು ನೀಡಿ ಹಂಚಿಕೆ ಮಾಡಲಾಗುತ್ತಿದೆ. ಮಂಡಳಿಯು ಸದರಿ ಉದ್ದಿಮೆದಾರರಿಗೆ ನೆರವೇರಿಸಲಾಗುತ್ತಿರುವ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರದಲ್ಲಿ ಶೇ.100 ರಷ್ಟು ಹಂಚಿಕೆ ದರವನ್ನು ನಮೂದಿಸಲಾಗುತ್ತಿದೆ.<br><br>• ಮುಂದುವರೆದು, ಸದರಿ ಹಂಚಿಕೆದಾರರಿಗೆ ಹಣಕಾಸು ಸಂಸ್ಥೆಗಳಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರವನ್ನು ಅಡಮಾನ ಮಾಡಿ, ಯೋಜನೆ ಅನುಷ್ಠಾನಗೊಳಿಸಲು ಹಣಕಾಸು ನೆರವು ಪಡೆಯಲು ನಿರಾಕ್ಷೇಪಣಾ ಪತ್ರ ನೀಡಲಾಗುತ್ತಿದೆ.<br><br>• ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಂಚಿಕೆದಾರರಿಗೆ ಹಂಚಿಕೆ ಮಾಡುವ ನಿಗಮದ ಮಳಿಗೆ ಮತ್ತು ನಿವೇಶನಗಳಿಗೆ ಅರ್ಹ ಸಹಾಯಧನವನ್ನು ವಿಸ್ತರಿಸಿದ ನಂತರ ಪೂರ್ತಿ ಮೌಲ್ಯವನ್ನು ನಿಗಧಿಪಡಿಸಿ, ಅವರಿಗೆ ಕರಾರು ಒಪ್ಪಂದ ಪತ್ರ ನಿರ್ವಹಿಸಿ ಕೊಡಲಾಗುತ್ತದೆ.<br><br>• ಬಂಡವಾಳ ಸಬ್ಸಿಡಿಯನ್ನು ಹಣಕಾಸು ಸಂಸ್ಥೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅವಧಿ ಸಾಲ ಮತ್ತು ದುಡಿಮೆ ಬಂಡವಾಳ ನೀಡುವಾಗ ಮಳಿಗೆ ಅಥವಾ ನಿವೇಶನದಲ್ಲಿನ ಮೌಲ್ಯ ರಿಯಾಯಿತಿಯನ್ನು ಮೇಲಾಧಾರ ಭದ್ರತೆಯಾಗಿ ಪರಿಗಣಿಸುವ ವಿಷಯವು KSSIDC ಗೆ ಸಂಬಂಧಿಸಿರುವುದಿಲ್ಲ. |

| | | |
|---|---|---|
| (ಆ) | ಈ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜ್ಯ ಪರಿಷತ್‌ನಲ್ಲಿ ಚರ್ಚೆಗಾಗಿ ತೀರ್ಮಾನಿಸಿದ್ದರೂ ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಗಳು ಪಾಲಿಸದಿರುವ ಬಗ್ಗೆ ವಿವರಗಳನ್ನು ನೀಡುವುದು? | ಕೆ.ಐ.ಎ.ಡಿ.ಬಿ ಮಂಡಳಿ ವತಿಯಿಂದ ಹಂಚಿಕೆದಾರರಿಗೆ ಹಣಕಾಸು / ಸಾಲದ ನೆರವು ಪಡೆಯಲು ನಿರಾಕ್ಷೇಪಣಾ ಪತ್ರವನ್ನು ಮಾತ್ರ ನೀಡಲಾಗುತ್ತದೆ. ಹಣಕಾಸು ನೆರವು ನೀಡುವುದು ಮಂಡಳಿಗೆ ಅನ್ವಯಿಸುವುದಿಲ್ಲ.<br><br>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಾಜ್ಯ ಪರಿಷತ್ ನಲ್ಲಿ ತೀರ್ಮಾನಿಸಿರುವುದನ್ನು ಪಾಲಿಸಲಾಗುತ್ತಿದೆ. |

**ಸಿಐ 21 ಎಸ್‌ಎಸ್‌ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು